ಸಾಕ್ಷಿಗೆ ದಿಃ 16.12.2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟಿ ಸವಾಲು 6 ರಿಂದ 8ನೇ ಪ್ರತಿವಾದಿ ಪರ ಶ್ರೀ ಎಂ ಎನ್ ವಕೀಲರಿಂದಃ

ನಮ್ಮ ತಂದೆ 1977 ನೇ ಇಸವಿಯಲ್ಲಿ ಕುಟುಂಬದಲ್ಲಿ ಸಾಲ ಮಾಡಿದ್ದರು ಎಂದರೆ ಕುಟುಂಬದ ಅಭಿವೃದ್ಧಿಗೆ ಸಾಲ ಮಾಡಿಲ್ಲ. ಜಮೀನುಗಳನ್ನು ಪಿ ಎಲ್ ಡಿ ಬ್ಯಾಂಕ್ ಗೆ ಅಡಮಾನ ಮಾಡಿ ಜಮೀನು ಅಭಿವೃದ್ಧಿಗೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಸಾಲ ತೀರಿಸಿದ ನಂತರ ಒಂದು ಪತ್ರವನ್ನು ಕೂಡ ಬರೆದಿದ್ದರು ಎಂದರೆ ಜಮೀನಿನ ಅಭಿವೃದ್ಧಿಗೆ ಯಾವುದೇ ಸಾಲ ಮಾಡಿಲ್ಲ. ಕುಟುಂಬದ ಅಭಿವೃದ್ಧಿಗಾಗಿ ನಮ್ಮ ತಂದೆ ಎಲ್ಲಾ ಸಾಲ ಮಾಡಿದ್ದರೂ ಎಂದು ಸೂಚಿಸುವುದು ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 61 ನ್ನು ಕವಿತಾರಿಗೆ ನಮ್ಮ ತಂದೆ ದಾನಪತ್ರ ಮಾಡಿದ್ದರು ಎಂದರೆ ಸರಿ ಆದರೆ ಅದು ಮೋಸದ ದಾನಪತ್ರ. ವಿಲ್ ಅಡಿಯಲ್ಲಿ ನನ್ನ ತಾಯಿ ಲಲಿತಮ್ಮನಿಗೆ ಮತ್ತು ಅಣ್ಣನಿಗೆ ಆಸ್ತಿ ಕೊಟ್ಟಿದ್ದಾರೆ ಎಂದರೆ ಸರಿ. ಆದರೆ ಅದು ಕೂಡ ಮೋಸದ್ದು. ವಿಲ್ ಮೂಲಕ ಬಂದ ಆಸ್ತಿಗಳನ್ನು ನನ್ನ ಅಣ್ಣ ಮತ್ತು ಲಲಿತಮ್ಮ ಅನುಭವಿಸುತ್ತಿದ್ದಾರೆ ಎಂದರೆ ಸರಿ. ನಮ್ಮ ತಂದೆ ಅತ್ಯಂತ ಪ್ರಾಮಾಣಿಕರಾಗಿ ಸ್ವ-ಇಚ್ಚೆಯಿಂದ ಎಲ್ಲಾ ದಾಖಲೆಗಳನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ತಂದೆ ಮತ್ತು ಸಹೋದರರು ಪಾಲು ಮಾಡಿಕೊಂಡಾಗ ನಾನು ಹಿಸ್ಸೆ ಕೇಳದೆ ಇದ್ದ ಕಾರಣ ಈ ದಾವಾ ಅವಧಿ ಬಾಧಕವಾಗಿದೆ ಎಂದರೆ ಸರಿಯಲ್ಲ. ಮದುವೆ ಸಂದರ್ಭದಲ್ಲಿ ನನ್ನ ತಾಯಿಗೆ 1 ಲಕ್ಷ ರೂಗಳನ್ನು ಆರ್ ಸಿ ಪಾಟೀಲ್ ತಂದುಕೊಟ್ಟರು ಎಂದರೆ ಸರಿಯಲ್ಲ. ನನ್ನ ಸಹೋದರ ರಾಜೇಶ್ವರಿ ವಿವಾಹವಾದಾಗ 1 ಲಕ್ಷ ರೂ ನನ್ನ ತಾಯಿಗೆ ಗೀತಾರವರ ಸಮ್ಮುಖದಲ್ಲಿ ಲಲಿತಮ್ಮನಿಗೆ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಗೊತ್ತಿದೆ. ವಿವಾಹ ಸಂದರ್ಭದಲ್ಲಿ 1.5 ಲಕ್ಷ ರೂಗಳನ್ನು ಕವಿತಾರ ಕುಟುಂಬದಿಂದ ಲಲಿತಮ್ಮನಿಗೆ ನೀಡಲಾಯಿತು ಎಂದರೆ ನನ್ನ ತಾಯಿಗೆ ಗೊತ್ತಿರಬಹುದು.

2. ನನ್ನ ತಾಯಿ ಲಲಿತಮ್ಮ ಒಂದು ಆಸ್ತಿಯನ್ನು ಅಗಸಹನಳ್ಳಿ ಸ.ನಂ. 29 ನ್ನು ಮಲ್ಲನಗೌಡರ ಮೈನರ್ ಗಾರ್ಡಿಯನ್ ನಾತೆಯಿಂದ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕುಸುಮಾ ಪಾಟೀಲ್ ನನ್ನನ್ನು ಆಗಾಗ ಗಂಡನ ಮನೆಯಿಂದ ಕರೆಸುವುದು ಕಳುಹಿಸುವುದು ಮಾಡಿದ್ದಾರೆ ಎಂದರೆ ಸರಿಯಲ್ಲ. ದ್ವಾರಹಳ್ಳಿ ಗ್ರಾಮದ ಖಾನೇಶುಮಾರಿ ಆಸ್ತಿಗಳನ್ನು ನಮ್ಮ ತಂದೆ ಚನ್ನಬಸಪ್ಪಗೌಡ ಮತ್ತು ಲಲಿತಮ್ಮನಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅಗಸಹನಳ್ಳಿ ಗ್ರಾಮದಲ್ಲಿ ಯಾವುದೇ ಖಾನೇಶುಮಾರಿ ಆಸ್ತಿ ಇಲ್ಲ ಎಂದರೆ ಸರಿ. ಆರ್ ಸಿ ಪಾಟೀಲ್ ರವರ ಹೆಸರಿನಲ್ಲಿದ್ದ ಆಸ್ತಿಗಳನ್ನು ನನ್ನ ತಂದೆ ಹೊರಗಿದ್ದಾಗ ನನ್ನ ತಾಯಿ ಲಲಿತಮ್ಮ ಅನುಭವಿಸಿ ವರಮಾನ

ಪಡೆಯುತ್ತಿದ್ದರು ಎಂದರೆ ನನ್ನ ಚಿಕ್ಕಪ್ಪ ಪಡೆಯುತ್ತಿದ್ದರು. 1965 ರಲ್ಲಿ ಪಾಲು ವಿಭಾಗ ಆಗಿದ್ದರೂ ಸಹ ನನ್ನ ತಂದೆಯ ಆಸ್ತಿಗಳನ್ನು ನನ್ನ ಚಿಕ್ಕಪ್ಪ ಸಿ ಸಿ ಪಾಟೀಲ್ ನೋಡಿಕೊಳ್ಳುತ್ತಿದ್ದರು. ವರಮಾನವನ್ನು ನನ್ನ ತಾಯಿ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಕುಟುಂಬಕ್ಕೆ ಯಾವುದೇ ಮೋಸ ವಂಚನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಲ ತೀರಿಸಲು ಕೊನೆಗಾಲದಲ್ಲಿ ಮಾತ್ರ 7 ಎಕರೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.